**ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿ.,**
**(ಕರ್ನಾಟಕ ಸರ್ಕಾರದ ಉದ್ಯಮ)**

# 2020–21ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ನಿಗಮದ ಯೋಜನೆಗಳ ಸಂಕ್ಷಿಪ್ತ ಮಾಹಿತಿ

**ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿ.,**
**ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ ಕಟ್ಟಡ,**
**ನಂ 16/ಐ, 1ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ,**
**ವಸಂತ ನಗರ, ಬೆಂಗಳೂರು-52**
Email.mdambngm@gmail.com
**Visit at : ambigaradevelopment.karnataka.gov.in**

# ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ಯಮ)**

**ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ ಕಟ್ಟಡ,**
**ನಂ 16/ಐ, 1ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ,**
**ವಸಂತ ನಗರ, ಬೆಂಗಳೂರು-52**

---

**ನಿಗಮದ ಸ್ಥಾಪನೆ:**

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮವನ್ನು ದಿನಾಂಕ: 10/11/2017ರಂದು ಕಂಪನಿ ಕಾಯ್ದೆ 2013ರನ್ವಯ ನೋಂದಾಯಿಸಿ ಸ್ಥಾಪನೆ ಮಾಡಲಾಗಿದೆ.

**ನಿಗಮದ ಧ್ಯೇಯೋದ್ದೇಶ:**

ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30/03/2002ರ ಆದೇಶದಲ್ಲಿನ ಪ್ರವರ್ಗ-1ರ 6(a) ಯಿಂದ 6(ak)ವರೆಗಿನ (a)ಕೋಲಿ, (b)ಗಂಗಾಮತ, (c)ಬೆಸ್ತ, (d)ಕಬ್ಬಲಿಗ, (e)ಮೊಗವೀರ, (f)ಅಂಬಿಗ/ಅಂಬಿ, (g)ಬಾರ್ಕಿ/ಬಾರಿಕ, (h)ಬೆಸ್ತರ್, (i)ಭೋಯಿ, (j)ರಾಜಬೋಯಿ, (k)ಬುಂಡೆ-ಬೆಸ್ತರ್, (l)ದಾಲ್ಜಿ, (m)ದಾವತ್, (n)ಗಬಿಟ್, (o)ಗಲಾಡಕೊಂಕಣಿ, (p)ಗಂಗೆಮಕ್ಕಳು, (q)ಗಂಗಾಕುಲ, (r)ಗಂಗಾಮತಸ್ಥ, (s)ಗಂಗಾಪುತ್ರ, (t)ಗೌರಿಮತ, (u)ಬುಂಡೆ-ಬೆಸ್ತ/ಗುಂಡೆಬೆಸ್ತ, (v)ಹರಕಂತ್ರ, (w)ಜಲಗಾರ, (x)ಕಬ್ಬೇರ/ಕಬ್ಬೇರ್, (y)ಕಬ್ಬಿಲಿ, (z)ಕಹರ್, (aa)ಖಾರ್ವಿ/ಕೊಂಕಣಖಾರ್ವಿ, (ab)ಕೋಳಿಮಹದೇವ್, (ac)ಮಡ್ಡರ್, (ad)ಮೀನಗಾರ್, (ae)ಮಗೇರ್, (af)ಮುಕ್ಕವಾನ್, (ag)ಪರಿವಾರ, (ah)ಸಿವಿಯರ್, (ai)ಸುಣಗಾರ, (aj)ತೊರೆಯ, (ak)ವಾಗಿ ಜಾತಿಗೆ ಸೇರಿದವರ ಆರ್ಥಿಕಾಭಿವೃದ್ಧಿಗಾಗಿ ಸಾಲ-ಸೌಲಭ್ಯ ಒದಗಿಸುವುದು ನಿಗಮದ ಉದ್ದೇಶವಾಗಿರುತ್ತದೆ.

**ನಿಗಮದಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳು**

1. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ
2. ಸ್ವಯಂ ಉದ್ಯೋಗ ಸಾಲ ಯೋಜನೆ.
3. ಕಿರುಸಾಲ / ಸ್ವಸಹಾಯ ಗುಂಪುಗಳಿಗೆ ಸಹಾಯ ಧನ
4. ಗಂಗಾಕಲ್ಯಾಣ ನೀರಾವರಿ ಯೋಜನೆ
5. ಅರಿವು ಶೈಕ್ಷಣಿಕ ಸಾಲ ಯೋಜನೆ.
6. ಕೌಶಲ್ಯಾಭಿವೃದ್ಧಿ/ಉದ್ಯಮಶೀಲತಾ ತರಬೇತಿ

**ಯೋಜನೆಗಳ ಸಂಕ್ಷಿಪ್ತ ವಿವರಗಳು ಹಾಗೂ ಅನುಷ್ಠಾನದ ವಿಧಿವಿಧಾನಗಳು**

## I. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ:

### 1. ಯೋಜನೆ ಉದ್ದೇಶ:-

ವ್ಯಾಪಾರ, ಕೈಗಾರಿಕೆ, ಸಾರಿಗೆ ಮತ್ತು ಸೇವಾ ವಲಯಗಳಲ್ಲಿ ಹೆಚ್ಚಿನ ಘಟಕ ವೆಚ್ಚವಿರುವ ಉದ್ಯಮಗಳಾದ ಆಟೋರಿಕ್ಷಾ, ಬೇಕರಿ, ಹೋಟೆಲ್, ಕಂಪ್ಯೂಟರ್ ಘಟಕ, ಹಿಟ್ಟಿನ ಗಿರಣಿ, ಆಟೋಮೊಬೈಲ್ ಗ್ಯಾರೇಜ್, ಮೊಬೈಲ್ ರಿಪೇರಿ ಅಂಗಡಿ, ಇಟ್ಟಿಗೆ ಉದ್ಯಮ ಇತ್ಯಾದಿ ಹೆಚ್ಚಿನ ಘಟಕ ವೆಚ್ಚವಿರುವ ಲಾಭದಾಯಕ ಉದ್ಯಮಗಳನ್ನು ಸ್ಥಾಪಿಸಿ ನಡೆಸಲು ಬ್ಯಾಂಕ್‌ಗಳಿಂದ ಸಾಲ

ಮತ್ತು ನಿಗಮದಿಂದ ಸಹಾಯಧನ ಒದಗಿಸಲು ಚೈತನ್ಯ ಸಬ್ಸಿಡಿ–ಕಂ–ಸಾಫ್ಟ್ ಲೋನ್ ಯೋಜನೆಯನ್ನು ರೂಪಿಸಿದೆ.

**2. ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:–**

ಅ. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ಸರ್ಕಾರಿ ಆದೇಶ ಸಂಖ್ಯೆ ಸಕಇ 225 ಬಿಸಿಎ 2000, ದಿನಾಂಕ 30.03.2002ರ ಆದೇಶದಲ್ಲಿ ಗುರ್ತಿಸಿದ ಪ್ರವರ್ಗ–I, ರಲ್ಲಿ ಕ್ರಮ ಸಂಖ್ಯೆ 53(a) ಯಿಂದ (v) ರಲ್ಲಿ ಬರುವ ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ, ಮತ್ತು ಇದರ ಉಪಜಾತಿಗಳಿಗೆ ಸೇರಿದವರಾಗಿರಬೇಕು.

ಆ. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರಾದರೆ ರೂ.98,000/–ಗಳ ಹಾಗೂ ನಗರ ಪ್ರದೇಶದವರಿಗೆ ರೂ.1,20,000/–ಗಳನ್ನು ಮೀರಿರಬಾರದು.

ಇ. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಈ. ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯೊಳಗಿರಬೇಕು.

ಉ. ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.

ಊ. ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.

ಋ. ವಿಕಲಚೇತನರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.

ಎ. **ಆದ್ಯತೆ:–** ವಿಧವೆಯರಿಗೆ, ತೃತೀಯ ಲಿಂಗದವರಿಗೆ ಹಾಗೂ ಮಾಜಿ ಸೈನಿಕರ ಕುಟುಂಬದ ಸದಸ್ಯರಿಗೆ ಆದ್ಯತೆ ಮೇಲೆ ಸೌಲಭ್ಯ ಒದಗಿಸಬೇಕು.

ಏ. ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.

ಐ. ಅಭ್ಯರ್ಥಿಯು ಕೈಗೊಳ್ಳುವ ಆರ್ಥಿಕ ಚಟುವಟಿಕೆಯ ಬಗ್ಗೆ ತರಬೇತಿ/ಅನುಭವ/ತಿಳುವಳಿಕೆ ಹೊಂದಿರಬೇಕು.

ಒ. ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

ಓ. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

3. **ಘಟಕ ವೆಚ್ಚ (ಸಾಲ ಮತ್ತು ಸಹಾಯಧನದ ಮೊತ್ತ):–**

**ಸಾಲದ ಮೊತ್ತ:–** ಅರ್ಜಿದಾರರು ಕೈಗೊಳ್ಳುವ ವ್ಯಾಪಾರ, ಕೃಷಿ ಮತ್ತು ಕೃಷಿ ಅವಲಂಭಿತ ಚಟುವಟಿಕೆಗಳು, ಸೇವಾ ಉದ್ದಿಮೆಗಳು, ತಾಂತ್ರಿಕ ಉದ್ದಿಮೆಗಳು ಮತ್ತು ಸಾರಿಗೆ ವಲಯದಲ್ಲಿ ಕೈಗೊಳ್ಳುವ ಆರ್ಥಿಕ ಚಟುವಟಿಕೆಯನುಸಾರ ಗರಿಷ್ಠ ರೂ.10.00ಲಕ್ಷಗಳವರೆಗೆ ಬ್ಯಾಂಕ್‌ಗಳಿಂದ ಸಾಲ ಪಡೆಯುವುದು.

**ಸಹಾಯಧನ:–** ಬ್ಯಾಂಕ್ ಮಂಜೂರು ಮಾಡುವ ಸಾಲದ ಮೊತ್ತದಲ್ಲಿ ಶೇ.20ರಷ್ಟು ಗರಿಷ್ಠ ರೂ.1.00ಲಕ್ಷಗಳನ್ನು ನಿಗಮದಿಂದ ಸಹಾಯಧನ ಮಂಜೂರು ಮಾಡಲಾಗುವುದು.

**ಬಡ್ಡಿ:–** ಬ್ಯಾಂಕ್‌ಗಳು ಮಂಜೂರು ಮಾಡುವ ಸಾಲಕ್ಕೆ ಬ್ಯಾಂಕ್‌ಗಳು ಚಾಲ್ತಿಯಲ್ಲಿರುವ ಬಡ್ಡಿಯನ್ನು ವಿಧಿಸಲಾಗುತ್ತದೆ.

4. **ಮರುಪಾವತಿ:–** ಬ್ಯಾಂಕ್‌ಗಳು ನಿಗಧಿಪಡಿಸುವ ಕಂತುಗಳನ್ವಯ ಸಾಲ ಮತ್ತು ಬಡ್ಡಿಯನ್ನು ಬ್ಯಾಂಕ್‌ಗಳಿಗೆ ಮರುಪಾವತಿ ಮಾಡಬೇಕು.

## II. ಸ್ವಯಂ ಉದ್ಯೋಗ ಸಾಲ ಯೋಜನೆ:

1. ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ ಮತ್ತು ಇದರ ಉಪಜಾತಿಯವರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗನುಸಾರ ಈ ಕೆಳಕಂಡಂತೆ ಸಾಲ ಮತ್ತು ಸಹಾಯಧನ ಸೌಲಭ್ಯವನ್ನು ಒದಗಿಸಲಾಗುವುದು.
    1. ಘಟಕ ವೆಚ್ಚ ರೂ.50,000/-ಗಳಿಗೆ ಶೇ.30 ರಷ್ಟು ಗರಿಷ್ಟ ರೂ.10,000/-ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.40,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
    2. ಘಟಕ ವೆಚ್ಚ ರೂ.50.001/-ರಿಂದ ರೂ.1,00,000/-ಗಳವರೆಗೆ ಶೇ.20 ರಷ್ಟು ಗರಿಷ್ಟ ರೂ.20,000/-ಗಳ ಸಹಾಯಧನ ಉಳಿಕೆ ಶೇ.80ರಷ್ಟು ರೂ.80,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.
    3. ಘಟಕ ವೆಚ್ಚ ರೂ.1,00,001/-ರಿಂದ ರೂ.2,00,000/-ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/-ಗಳ ಗರಿಷ್ಟ ರೂ.30,000/-ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1,70,000/-ಗಳನ್ನು ಶೇ.4ರ ಬಡ್ಡಿ ದರದಲ್ಲಿ ಸಾಲ.

2. **ಅರ್ಹತೆ:**

    ಅ) ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಬರುವ ಬೆಸ್ತ, ಕೋಲಿ, ಕಬ್ಬಲಿಗ, ಗಂಗಾಮತ, ಮೊಗವೀರ ಮತ್ತು ಇದರ ಉಪಜಾತಿಯವರು ಸೇರಿದವರಾಗಿರಬೇಕು.

    ಆ) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/-ಗಳು ಪಟ್ಟಣ ಪ್ರದೇಶದವರಿಗೆ ರೂ.1,20,000/-ಗಳ ಒಳಗಿರಬೇಕು.

    ಇ) ಅರ್ಜಿದಾರರ ವಯಸ್ಸು 18 ರಿಂದ 55 ವರ್ಷದೊಳಗಿರಬೇಕು.

    ಈ) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

    ಉ) ಈ ಹಿಂದೆ ಈಗಾಗಲೇ ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆದಿರಬಾರದು.

3. **ಸಾಲದ ಮರುಪಾವತಿ ಅವಧಿ:** 3 ವರ್ಷಗಳು(ಮಾಸಿಕ ಕಂತುಗಳಲ್ಲಿ).

4. **ಸಾಲದ ಉದ್ದೇಶಗಳು**: ಈ ಯೋಜನೆಯಲ್ಲಿ ಕೃಷಿ ಅವಲಂಭಿತ ಚಟುವಟಿಕೆಗಳು, ವ್ಯಾಪಾರ ಚಟುವಟಿಕೆಗಳು ಹಾಗೂ ಸೇವಾ ವಲಯ ಹಾಗು ಸಣ್ಣ ಕೈಗಾರಿಕೆ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸುವುದು.

## III. ಕಿರುಸಾಲ / ಸ್ವಸಹಾಯ ಗುಂಪುಗಳಿಗೆ ಸಹಾಯ ಧನ

ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ, ಮತ್ತು ಇದರ ಉಪಜಾತಿಯ ಸಮುದಾಯದ ಮಹಿಳೆಯರಿಗೆ/ಪುರುಷರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಮಹಿಳಾ/ಪುರುಷ ಸ್ವಸಹಾಯ ಗುಂಪುಗಳ ಮೂಲಕ ವಿವಿಧ ಆರ್ಥಿಕ ಚಟುವಟಿಕೆಗಳು, ವ್ಯಾಪಾರ, ಸೇವೆ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನವನ್ನು ಒದಗಿಸಲಾಗುವುದು.

1. **ಯೋಜನೆಯ ಉದ್ದೇಶಗಳು**

    ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮತ್ತು ಮೊಗವೀರ, ಸಮುದಾಯದ ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸ್ವಸಹಾಯ ಗುಂಪುಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಹಾಗೂ ಸಹಯಧನವನ್ನು ಒದಗಿಸುವುದು.

2. **ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು**

ಅ) ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅರ್ಜಿದಾರರು ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ, ಸಮುದಾಯಕ್ಕೆ ಸೇರಿದ್ದು, ಸ್ವಸಹಾಯ ಗುಂಪಿನ ಸದಸ್ಯರಾಗಿರಬೇಕು.

ಆ) ದಿನಾಂಕ:30/03/2002ರ ಸರ್ಕಾರದ ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಡಿ/228/ಬಿಸಿಎ/2000ರಲ್ಲಿ ಗುರ್ತಿಸಿದ ಹಿಂದುಳಿದ ವರ್ಗಗಳ ಪ್ರವರ್ಗ–1 ರಲ್ಲಿ ಬರುವ ಬೆಸ್ತ, ಕೋಲಿ, ಗಂಗಾಮತ, ಕಬ್ಬಲಿಗ, ಮೊಗವೀರ, ಮತ್ತು ಅದರ ಉಪಜಾತಿಗಳಿಗೆ ಸೇರಿರಬೇಕು.

ಇ) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/–ಗಳು, ಪಟ್ಟಣ ಪ್ರದೇಶದವರಿಗೆ ರೂ.1,20,000/–ರೂ.ಗಳನ್ನು ಮೀರಿರಬಾರದು.

ಈ) ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.

ಉ) ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.

ಊ) ನಿಗಮದ ಬೇರೆ ಯಾವುದೇ ಯೋಜನೆಯಲ್ಲಿ ಸಾಲ ಅಥವಾ ಸವಲತ್ತು ಪಡೆದಿರಬಾರದು.

ಋ) ಈ ಯೋಜನೆಯಲ್ಲಿ ಶೇ.5ರಷ್ಟು ಅಂಗವಿಕಲರಿಗೆ ಸೌಲಭ್ಯ ಒದಗಿಸಬೇಕು.

ಎ) ಈ ಯೋಜನೆಯಲ್ಲಿ ಸಾಲ ಪಡೆಯ ಬಯಸುವ ಅರ್ಜಿದಾರರು ಯಾವುದಾದರೂ ಆರ್ಥಿಕ ಚಟುವಟಿಕೆ ಕೈಗೊಳ್ಳಬೇಕು.

ಏ) ಬೆಸ್ತ, ಕೋಳಿ, ಕಬ್ಬಲಿಗ, ಮೊಗವೀರ, ಗಂಗಾಮತ ಸಮುದಾಯದ ಮಹಿಳೆಯರು/ಪುರುಷರು ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡಿರಬೇಕು ಅಥವಾ ರಚಿಸಿಕೊಳ್ಳಬೇಕು. ಸ್ವಸಹಾಯ ಗುಂಪುಗಳ ಸದಸ್ಯರಿಗೆ ಗುಂಪುಗಳ ಮೂಲಕ ಸೌಲಭ್ಯ ಒದಗಿಸಲಾಗುವುದು.

ಐ) ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ, ಸಮುದಾಯದ ಸ್ವಸಹಾಯ ಗುಂಪುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್ ಶಾಖೆಗಳಲ್ಲಿ ಖಾತೆ ಹೊಂದಿರಬೇಕು.

3. **ಘಟಕವೆಚ್ಚ, ಸಾಲದ ಮೊತ್ತ ಮತ್ತು ಸಹಾಯಧನ**

ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ, ಸಮುದಾಯದ ಸ್ವಸಹಾಯ ಗುಂಪುಗಳ 15 ಸದಸ್ಯರಿಗೆ ತಲಾ ರೂ.5,000/–ಗಳ ಸಹಾಯಧನ ಹಾಗೂ ಸಾಲ ರೂ.15,000/–ಗಳನ್ನು ಶೇ.4ರಷ್ಟು ಬಡ್ಡಿದರದಲ್ಲಿ ಹೀಗೆ ಪ್ರತಿ ಗುಂಪಿಗೆ ರೂ.75,000/–ಗಳ ಸಹಾಯಧನ ಹಾಗೂ ರೂ.2,25,000/–ಗಳ ಸಾಲ ಒಟ್ಟು ರೂ.3,00,000/–ಗಳನ್ನು ಮಂಜೂರು ಮಾಡುವುದು.

4. **ಮರುಪಾವತಿ ಅವಧಿ:–**

ಅ) ಈ ಯೋಜನೆಯಲ್ಲಿ ಪಡೆದ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ 34 ಕಂತುಗಳಲ್ಲಿ ಮಂಜೂರಾತಿ ಆದೇಶದಲ್ಲಿ ನಿಗದಿ ಪಡಿಸಿದಂತೆ ಅಸಲು ಮತ್ತು ಬಡ್ಡಿಯನ್ನು ಮರುಪಾವತಿಸಬೇಕು. ಸಾಲದ ಮರುಪಾವತಿಗೆ 2 ತಿಂಗಳು ವಿರಾಮಾವಧಿ ನೀಡಲಾಗುತ್ತದೆ.

5. **ಡಿ.ಸಿ.ಬಿ.ತಯಾರಿಸಿ ಸಾಲ ವಸೂಲಾತಿಗೆ ಕ್ರಮ:–**

ಅ) ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು ಮರುಪಾವತಿಸಬೇಕು. ವಿಳಂಬ ಅವಧಿಗೆ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಿ ವಸೂಲಿ ಮಾಡಬೇಕು.

ಆ) ಸಾಲ ಮರುಪಾವತಿಸದೆ ಸುಸ್ತಿಯಾದ ಫಲಾನುಭವಿಗಳಿಗೆ/SHG (ಸ್ವಸಹಾಯ ಗುಂಪು)ಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು.

6. **ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು**

ಅ) ಅರ್ಜಿದಾರರು ಬೆಸ್ತ, ಕೋಳಿ, ಕಬ್ಬಲಿಗ, ಮೊಗವೀರ, ಗಂಗಾಮತ ಸಮುದಾಯಕ್ಕೆ ಸೇರಿರುವ ಬಗ್ಗೆ ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರ್/ಕಂದಾಯ ಅಧಿಕಾರಿಗಳಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ ಮತ್ತು ವಾರ್ಷಿಕ ಆದಾಯ ಪ್ರಮಾಣ ಪತ್ರ.

ಆ) ಅರ್ಜಿದಾರರ ವಾಸದ ಪುರಾವೆಗಾಗಿ ಆಧಾರ್ ಕಾರ್ಡ್/ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ.

ಇ) ಅರ್ಜಿದಾರರ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 03 ಫೋಟೋಗಳು.

ಈ) ಸ್ವಸಹಾಯ ಗುಂಪು ರಚಿಸಿರುವ ಬಗ್ಗೆ ಸ್ವಸಹಾಯ ಗುಂಪಿನ ನಡವಳಿ ಪುಸ್ತಕ ಹಾಗೂ ಬ್ಯಾಂಕ್ ಶಾಖೆಗಳಲ್ಲಿ ಸ್ವಸಹಾಯ ಗುಂಪಿನ ಹೆಸರಿನಲ್ಲಿ ಹೊಂದಿರುವ ಖಾತಾ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಸಂಖ್ಯೆಯ ಮಾಹಿತಿಗೆ ಪಾಸ್‌ಪುಸ್ತಕದ ಜೆರಾಕ್ಸ್ ಅಥವಾ ರದ್ದುಗೊಳಿಸಿದ ಚೆಕ್‌ನ ಪ್ರತಿ.

ಉ) ಸಾಲದ ಭದ್ರತೆಗೆ ಸ್ವಸಹಾಯ ಗುಂಪಿನ ಎಲ್ಲಾ ಸದಸ್ಯರು ಬದ್ಧರಾಗಿರುವ ಬಗ್ಗೆ ಮುಚ್ಚಳಿಕೆ ಬರೆದು ಕೊಡಬೇಕು.

ಊ) ಅರ್ಜಿದಾರರ ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣಭಾರದ ಘೋಷಣೆ.

ಋ) ಅರ್ಜಿದಾರರ ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ.

## IV. ಗಂಗಾಕಲ್ಯಾಣ ನೀರಾವರಿ ಯೋಜನೆ:

1. **ಉದ್ದೇಶ:** ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಬರುವ ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ ಮತ್ತು ಇದರ ಉಪಜಾತಿಗಳಿಗೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು.
2. **ಅರ್ಹತೆ:** ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಬರುವ ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ ಮತ್ತು ಇದರ ಉಪಜಾತಿಗಳಿಗೆ ಸೇರಿದವರಾಗಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು. ಅವರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/-ಗಳ ಒಳಗಿರಬೇಕು.
3. ಅರ್ಜಿದಾರರು ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಕ್ಕೆ ಸೇರಿದವರಾಗಿದ್ದು, ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 2 ಎಕರೆ ಜಮೀನಿ ಹೊಂದಿರಬೇಕು. ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.
4. ಅರ್ಜಿದಾರರು ವ್ಯವಸಾಯ ವೃತ್ತಿಯವರಾಗಿರಬೇಕು
5. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
6. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.
7. ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
8. ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
9. ನಿಗಮದ ನಿರ್ದೇಶಕ ಮಂಡಳಿಯು ಕಾಲ ಕಾಲಕ್ಕೆ ವಿಧಿಸುವ ಅರ್ಹತೆಗಳನ್ನು ಹೊಂದಿದವರಾಗಿರಬೇಕು.
10. **ಸೌಲಭ್ಯ:**
    1. **ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ:** ಈ ಯೋಜನೆಯಲ್ಲಿ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಉಳಿಕೆ ಜಿಲ್ಲೆಗಳಲ್ಲಿ ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಇರಬೇಕು.

       **ಘಟಕವೆಚ್ಚ:** ರೂ.2.00ಲಕ್ಷಗಳು ಈ ಮೊತ್ತದಲ್ಲಿ ರೂ 1.50 ಲಕ್ಷ ಸಹಾಯ ಧನ ಹಾಗೂ ಘಟಕ ಪೂರ್ಣಗೊಳಿಸಲು ಹೆಚ್ಚುವರಿ ಮೊತ್ತ ಅವಶ್ಯವಿದಲ್ಲಿ ಗರಿಷ್ಠ ರೂ 50,000/-ಗಳ ಸಾಲವನ್ನು ಶೇ 4ರ ಬಡ್ಡಿದರದಲ್ಲಿ ಮಂಜೂರು ಮಾಡುವುದು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು

ಜಿಲ್ಲೆಗಳಿಗೆ ಸಂಬಂಧಿಸಿದಂತೆ, ವೈಯಕ್ತಿಕ ಕೊಳವೆ ಬಾವಿ ವೆಚ್ಚ ರೂ 3.50 ಲಕ್ಷ. ಇದರಲ್ಲಿ ರೂ 3.00 ಲಕ್ಷ ಸಹಾಯಧನ ಉಳಿಕೆ ರೂ 50,000/–ಗಳು ಸಾಲ ವಾಗಿರುತ್ತದೆ.

ಅಲ್ಲದೇ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಪ್ರತಿ ಕೊಳವೆ ಬಾವಿಗೆ ರೂ 50,000/– ದಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುದೀಕರಣ ವೆಚ್ಚವನ್ನು ಪಾವತಿಸುವುದು.

**ಮರುಪಾವತಿ ಅವಧಿ**: ಸಾಲದ ಮರುಪಾವತಿ ಅವಧಿ 3 ವರ್ಷಗಳು.

2. **ತೆರೆದಬಾವಿ**: ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಕರಾವಳಿ ಹಾಗೂ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ತೆರೆದಬಾವಿ ನೀರಾವರಿ ಸೌಲಭ್ಯ ಒದಗಿಸಲು ಅವಕಾಶವಿರುತ್ತದೆ.

## V. a) ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗಕ್ಕೆ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು:

1. **ಸಾಲದ ಉದ್ದೇಶ**: ಹಿಂದುಳಿದ ವರ್ಗಗಳ ಪ್ರವರ್ಗ–1ರಲ್ಲಿ ಬರುವ ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ ಮತ್ತು ಇದರ ಉಪಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕಾಭಿವೃದ್ಧಿಗಾಗಿ ಆರ್ಥಿಕ ನೆರವು.
2. **ಸಾಲದ ಮೊತ್ತ:** ವಾರ್ಷಿಕ ರೂ.1.00 ಲಕ್ಷಗಳಂತೆ ಕೋರ್ಸ್ ಅವಧಿಗೆ ಗರಿಷ್ಠ ರೂ.4.00 ರಿಂದ ರೂ.5.00 ಲಕ್ಷಗಳವರೆಗೆ ಸಾಲ.
3. **ಬಡ್ಡಿದರ:** ವಾರ್ಷಿಕ ಶೇ.2 ರಷ್ಟು.
4. **ಅರ್ಹತೆ**:

ಅ) ಹಿಂದುಳಿದ ವರ್ಗಗಳ ಪ್ರವರ್ಗ–01ರಲ್ಲಿ ಬರುವ ಕೋಲಿ, ಗಂಗಾಮತ, ಬೆಸ್ತ, ಕಬ್ಬಲಿಗ, ಮೊಗವೀರ ಮತ್ತು ಇದರ ಉಪಜಾತಿಗಳಿಗೆ ಸೇರಿರಬೇಕು.

ಆ) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.3.50 ಲಕ್ಷಗಳ ಮಿತಿಯಲ್ಲಿರಬೇಕು.

ಇ) ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ(ಸಿ.ಇ.ಟಿ.) ಪ್ರವೇಶ ಪಡೆದಿರಬೇಕು.

5. **ವ್ಯಾಸಂಗದ ಕೋರ್ಸ್‌ಗಳು:** (1) ಬಿ.ಇ., (2) ಎಂ.ಬಿ.ಬಿ.ಎಸ್., (3) ಬಿ.ಯೂ.ಎಂ.ಎಸ್., (4) ಬಿ.ಡಿ.ಎಸ್. (5) ಬಿ.ಎ.ಎಂ.ಎಸ್. (6) ಬಿ.ಎಚ್.ಎಂ.ಎಸ್. (7) ಎಂ.ಬಿ.ಎ. (8) ಎಂ.ಟೆಕ್. (9) ಎಂ.ಇ., (10) ಎಂ.ಡಿ., (11) ಪಿಹೆಚ್.ಡಿ. (12) ಬಿ.ಸಿ.ಎ./ಎಂ.ಸಿ.ಎ (13) ಎಂ.ಎಸ್.ಆಗ್ರಿಕಲ್ಚರ್ (14)ಬಿ.ಎಸ್‌ಸಿ. ನರ್ಸಿಂಗ್, (15)ಬಿ.ಫಾರಂ/ಎಂ.ಫಾರಂ (16) ಬಿ.ಎಸ್‌ಸಿ. ಪ್ಯಾರಾ ಮೆಡಿಕಲ್ (17) ಬಿ.ಎಸ್‌ಸಿ. ಬಯೋ ಟೆಕ್ನಾಲಜಿ (18) ಬಿ.ಟೆಕ್ (19) ಬಿ.ಪಿ.ಟಿ. (20)ಬಿ.ವಿ.ಎಸ್.ಸಿ/ಎಂ.ವಿ.ಎಸ್.ಸಿ. (21)ಬಿ.ಎನ್.ಎಂ. (22)ಬಿ.ಹೆಚ್.ಎಮ್. (23)ಎಂ.ಡಿ.ಎಸ್. (24)ಎಂ.ಎಸ್.ಡಬ್ಲ್ಯೂ (25) ಎಲ್.ಎಲ್.ಎಂ. (26)ಎಂ.ಎಫ್.ಎ. (27) ಎಂ.ಎಸ್‌ಸಿ. ಬಯೋ ಟೆಕ್ನಾಲಜಿ ಮತ್ತು (28) ಎಂ.ಎಸ್‌ಸಿ. ಎಜಿ 29)ಎಂ.ಕಾಂ 30)ಎಂ.ಎಸ್ಸಿ.
6. **ಮರುಪಾವತಿ**: ಕೋರ್ಸ್ ಪೂರ್ಣಗೊಂಡ 4 ತಿಂಗಳ ನಂತರ 3 ವರ್ಷಗಳಲ್ಲಿ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡುವುದು.

b) **ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು:**

- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್.ಡಿ., ಪೋಸ್ಟ್ ಡಾಕ್ಟೋರಲ್ ಮತ್ತು ಮಾಸ್ಟರ್ ಡಿಗ್ರಿ ಹಾಗು ತಾಂತ್ರಿಕ ಮತ್ತು ವೈದ್ಯಕೀಯ ಇತ್ಯಾದಿ ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ಪ್ರವೇಶ ಹೊಂದಿದ ಪ್ರವರ್ಗ-1ರಲ್ಲಿ ಬರುವ ಬೆಸ್ತ, ಕೋಲಿ, ಕಬ್ಬಲಿಗ, ಗಂಗಾಮತ, ಮೊಗವೀರ ಮತ್ತು ಇದರ ಉಪಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸಾಲ-ಸೌಲಭ್ಯ ಒದಗಿಸಲಾಗುವುದು.

- ಸಾಲದ ಮೊತ್ತ ವಾರ್ಷಿಕ ಗರಿಷ್ಠ ರೂ.5.00ಲಕ್ಷಗಳಂತೆ 3 ವರ್ಷಗಳ ಅವಧಿಗೆ ಶೇ.4ರ ಬಡ್ಡಿದರದಲ್ಲಿ ರೂ.15.00ಲಕ್ಷಗಳ ಸಾಲ-ಸೌಲಭ್ಯ ಒದಗಿಸಲಾಗುವುದು.

- ಮರುಪಾವತಿ ಅವಧಿ: ಗರಿಷ್ಠ 60 ಮಾಸಿಕ ಕಂತುಗಳು ವ್ಯಾಸಂಗ ಪೂರ್ಣಗೊಂಡ 6 ತಿಂಗಳ ನಂತರ ಅಥವಾ ಉದ್ಯೋಗ ದೊರೆತ 3 ತಿಂಗಳ ನಂತರ (ಇದರಲ್ಲಿ ಯಾವುದು ಮೊದಲು ಅದು) ಮರುಪಾವತಿ ಕಂತು ಪ್ರಾರಂಭವಾಗುತ್ತದೆ.

7. **ಅಭ್ಯರ್ಥಿಗಳ ಆಯ್ಕೆ:** ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಹಾಗು ಇತರೆ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಹಾಗು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಜಿಲ್ಲೆಗೆ ನಿಗದಿಪಡಿಸಿದ ಆರ್ಥಿಕ ಮತ್ತು ಭೌತಿಕ ಗುರಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

## ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಆಯಾ ಯೋಜನೆಗನುಸಾರವಾಗಿ ಸಲ್ಲಿಸಬೇಕಾದ ದಾಖಲಾತಿಗಳು.

**i. ಸಾಲ ಮಂಜೂರಾತಿ ಪೂರ್ವ ಸಲ್ಲಿಸಬೇಕಾದ ದಾಖಲೆಗಳು:**

1. ಆಯಾ ಯೋಜನೆಗೆ ನಿಗದಿ ಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ ನಮೂನೆ.
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ. (5 ವರ್ಷಗಳ ಅವಧಿ ಒಳಗಿರಬೇಕು, ನಕಲು ಪ್ರತಿ ಲಗತ್ತಿಸಬೇಕು ಹಾಗೂ ಸೂಚಿಸಿದಾಗ ಮೂಲ ಪ್ರತಿ ಹಾಜರು ಪಡಿಸಬೇಕು.)
3. ವಿಳಾಸ ದೃಢೀಕರಣಕ್ಕೆ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಕೆ.ಪಿ.ಟಿ.ಸಿ.ಎಲ್. ಆರ್.ಆರ್. ನಂ. ಇರುವ ಬಿಲ್ಲಿನ ಜೆರಾಕ್ಸ್ ಪ್ರತಿ/ಆಧಾರ ಕಾರ್ಡ್‌ನ ಜೆರಾಕ್ಸ್ ಪ್ರತಿ.
4. ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು.
5. ಘಟಕಗಳಿಗೆ ಅಗತ್ಯವಿದ್ದಲ್ಲಿ ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿಗಳಿಂದ ಲೈಸೆನ್ಸ್/ ಪರವಾನಗಿ ಪತ್ರ.
6. ಸಾರಿಗೆ ವಲಯದಲ್ಲಿ ಸಾಲ ಪಡೆಯಲು ಡ್ರೈವಿಂಗ್ ಲೈಸೆನ್ಸ್.(ಜೆರಾಕ್ಸ್ ಪ್ರತಿ)
7. ರೂ.1,00,000/-ಗಳಿಗಿಂತ ಹೆಚ್ಚಿನ ಸಾಲದ ಭದ್ರತೆಗೆ ನಿಗಮಕ್ಕೆ ಸ್ಥಿರಾಸ್ತಿಯನ್ನು ಆಧಾರ ಮಾಡಬೇಕು. ಅರ್ಜಿದಾರರು ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯ

ದಾಖಲಾತಿಗಳಾದ, ಮೂಲ ಕ್ರಯ ಪತ್ರ, 3 ವರ್ಷಗಳ ಪಹಣಿ, ಖಾತಾ ಉದ್ಧರಣೆ, 13 ವರ್ಷಗಳ ಋಣಭಾರ ರಾಹಿತ್ಯ ಪ್ರಮಾಣ ಪತ್ರ, ಸ್ಥಿರಾಸ್ತಿ ಮೌಲ್ಯ ನಿರ್ಣಯ ಪತ್ರ, ಕಂದಾಯ ಪಾವತಿ ರಶೀದಿ ಇತ್ಯಾಧಿ.

8. ರಾಷ್ಟ್ರೀಕೃತ/ಶೆಡ್ಯೂಲ್/ಗ್ರಾಮೀಣ ಬ್ಯಾಂಕ್‌ನಲ್ಲಿ ಫಲಾನುಭವಿಯು ಹೊಂದಿರುವ ಬ್ಯಾಂಕ್ ಖಾತಾ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್ ಹೊಂದಿದ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
9. ಶೈಕ್ಷಣಿಕ ಸಾಲ ಯೋಜನೆಗೆ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ವ್ಯಾಸಂಗದ ದೃಢೀಕರಣ ಪತ್ರ.
10. ವಿದ್ಯಾರ್ಥಿ ಮೆರಿಟ್ ಆಧಾರದ ಮೇಲೆ ಸೀಟು ಪಡೆದಿರುವ ಬಗ್ಗೆ ಸಿ.ಇ.ಟಿ./ಪ್ರಾಧಿಕಾರ ರವರು ನೀಡಿರುವ ಸೀಟು ಹಂಚಿಕೆ ಪತ್ರ.
11. ಗಂಗಾಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯ ಪಡೆಯಲು ಅರ್ಜಿದಾರರು ಸಣ್ಣ ಮತ್ತು ಅತಿಸಣ್ಣ ರೈತರಾಗಿರಬೇಕು. ಈ ಬಗ್ಗೆ ಸಂಬಂಧಿಸಿದ ತಹಶಿಲ್ದಾರ್/ಕಂದಾಯ ಅಧಿಕಾರಿಗಳಿಂದ ಪಡೆದ ದೃಢೀಕೃತ ಪ್ರಮಾಣ ಪತ್ರ ಹಾಗು ಜಮೀನಿಗೆ ಸಂಬಂಧಿಸಿದ ಪಾಹಣಿ, ಖಾತಾ ಉದ್ಧರಣೆ, ನಕ್ಷೆ, ನೀರಾವರಿ ಸೌಲಭ್ಯ ಹೊಂದಿಲ್ಲದೇ ಇರುವ ಬಗ್ಗೆ ದೃಢೀಕರಣ.
12. ಗಂಗಾಕಲ್ಯಾಣ ಯೋಜನೆಯಲ್ಲಿ ಏತನೀರಾವರಿ ಯೋಜನೆಗೆ ಭೂಮಟ್ಟದಲ್ಲಿ ದೊರೆಯುವ ನೀರನ್ನು ಬಳಸಿಕೊಳ್ಳಲು ಸಂಬಂಧಿಸಿದ ನೀರಾವರಿ ಇಲಾಖೆಯಿಂದ ಅನುಮತಿ ಪತ್ರ.
13. ಅರ್ಜಿದಾರರು ಕೈಗೊಳ್ಳುವ ಆರ್ಥಿಕ ಚಟುವಟಿಕೆಯಲ್ಲಿ ಅನುಭವ/ತರಬೇತಿ ಬಗ್ಗೆ ಪ್ರಮಾಣ ಪತ್ರ/ಸ್ವಯಂ ಘೋಷಣೆ ಪತ್ರ.
14. ಅರ್ಜಿದಾರರು ಉದ್ಯಮ ಸ್ಥಾಪಿಸಲು ಅವಶ್ಯವಿರುವ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಲು ಸರಬರಾಜುದಾರರಿಂದ ಪಡೆದ Invoice ಮತ್ತು ಯೋಜನಾ ವರದಿ ಒದಗಿಸುವುದು.
15. ಅರ್ಜಿದಾರರು ಸ್ಥಾಪಿಸುವ ಉದ್ಯಮಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಅಗತ್ಯ ಲೈಸೆನ್ಸ್ ಹಾಗು ಪರವಾನಗಿ ಹೊಂದಿರಬೇಕು.
16. ಸಾಲದ ಭದ್ರತೆಗೆ ಬ್ಯಾಂಕ್ ವ್ಯವಸ್ಥಾಪಕರು ಕೋರುವ ಅಗತ್ಯ ದಾಖಲಾತಿಗಳನ್ನು ಒದಗಿಸುವುದು.
17. ಅರ್ಜಿದಾರರ ಆಸ್ತಿ ಮತ್ತು ಋಣಭಾರಗಳ ಘೋಷಣಾ ಪತ್ರ (ನಿಗದಿತ ನಮೂನೆಯಲ್ಲಿ).

ii. **ಸಾಲ ಮಂಜೂರಾದ ನಂತರ ಸಲ್ಲಿಸಬೇಕಾದ ದಾಖಲೆಗಳು/ಭದ್ರತಾ ದಾಖಲೆಗಳು:**

1. ಸಾಲ ಮಂಜೂರಾತಿ ಆದೇಶದಲ್ಲಿ ತಿಳಿಸಿರುವಂತೆ ಸಾಲದ ಭದ್ರತಾ ದಾಖಲೆಗಳು. (ಪ್ರೊನೋಟ್, ಲೆಟರ್ ಆಫ್ ರೀಪೆಮೆಂಟ್, ಲೆಟರ್ ಆಫ್ ಗ್ಯಾರಂಟಿ, ಹೈಪಾಥಿಕೇಶನ್ ಡೀಡ್ ಇತ್ಯಾದಿ)
2. ಅರ್ಜಿದಾರರು ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣಭಾರಗಳ ಘೋಷಣೆ.
3. ಬೇಬಾಕಿ ಪತ್ರ.
4. ರೂ.1.00ಲಕ್ಷಗಳಿಗಿಂತ ಹೆಚ್ಚಿನ ಸಾಲಕ್ಕೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಯ ಕಂದಾಯ ದಾಖಲೆಗಳು.

**ಆಯ್ಕೆಯ ವಿಧಾನ ಮತ್ತು ಮಾರ್ಗಸೂಚಿಗಳು:**

1. ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಆಯವ್ಯಯವನ್ನು ಅವಲಂಭಿಸಿ ಯೋಜನಾವಾರು, ಜಿಲ್ಲಾವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗುವುದು.
2. ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ, ವರ್ಷದ ಪ್ರಾರಂಭದಲ್ಲಿ ಪತ್ರಿಕಾ ಪ್ರಕಟಣೆಯ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು.
3. ಮುಖ್ಯಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆಮಾಡಲಾಗುವುದು.

**ವಿಶೇಷ ಸೂಚನೆ:** ಈ ಮಾಹಿತಿಯು ಸಂಕ್ಷಿಪ್ತ ರೂಪದ್ದಾಗಿರುತ್ತದೆ. ನಿಗಮದಿಂದ ಸೌಲಭ್ಯ ಪಡೆಯಲು ಬಯಸುವವರು ಹೆಚ್ಚಿನ ಮಾಹಿತಿಗೆ ಈ ಕೆಳಕಂಡ ವಿಳಾಸಗಳಲ್ಲಿರುವ ನಿಗಮದ ಕೇಂದ್ರ ಕಛೇರಿ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿ./ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಿಭಾಗೀಯ ಕಛೇರಿ ಅಥವಾ ಜಿಲ್ಲಾ ಕಛೇರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

## ನಿಗಮದ ರಿಜಿಸ್ಟರ್ಡ್ ಕಛೇರಿ ವಿಳಾಸ

**ವ್ಯವಸ್ಥಾಪಕ ನಿರ್ದೇಶಕರು,**
ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ(ನಿ),
ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿ. ಕಟ್ಟಡ
ನಂ.16/ಐ, 1ನೇ ಮಹಡಿ,
ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ,
ವಸಂತನಗರ, ಬೆಂಗಳೂರು-560 052

**ವಿಭಾಗ ಕಛೇರಿಗಳ ವಿಳಾಸ**

1. **ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ.ಬಿ.ಸಿ.ಡಿ.ಸಿ., ಬೆಂಗಳೂರು ವಿಭಾಗ,** ದೇವರಾಜ ಅರಸು ಭವನ, ನಂ.16/ಡಿ, 4ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು-560052.
   ☎080-22374832, 22374833,
   ಫ್ಯಾಕ್ಸ್: 080-22374833
2. **ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ.ಬಿ.ಸಿ.ಡಿ.ಸಿ., ಮೈಸೂರು ವಿಭಾಗ,** ನಂ.43, ಹಳೆ ನಂಬರ್ ಸಿ.ಹೆಚ್.-54/2, ಸಿಹೆಚ್-54/3, 5ನೇ ಕ್ರಾಸ್, 2ನೇ ಮೇನ್, ಜಯನಗರ, ಮೈಸೂರು-570014 ☎ 08212-340401
3. **ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ.ಬಿ.ಸಿ.ಡಿ.ಸಿ., ಬೆಳಗಾವಿ ವಿಭಾಗ,** ಎಸ್.ಜೆ.ಎಸ್.ವೈ. ಮಾರಾಟ ಮಳಿಗೆಗಳ ಕಟ್ಟಡ, 2ನೇ ಮಹಡಿ, ಎ.ಪಿ.ಎಂ.ಸಿ. ರಸ್ತೆ, ನೆಹರು ನಗರ, ಬೆಳಗಾವಿ-590010
   ☎ 0831-2472458
4. **ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ.ಬಿ.ಸಿ.ಡಿ.ಸಿ., ಗುಲ್ಬರ್ಗಾ ವಿಭಾಗ,** ಕೊಠಡಿ ಸಂಖ್ಯೆ: 22, 3ನೇ ಮಹಡಿ, ವಿಕಾಸ ಭವನ, ಮಿನಿ ವಿಧಾನ ಸೌಧ, ಕಲಬುರಗಿ-585101
   ☎ 08472-278635

# ನಿಗಮದ ಜಿಲ್ಲಾ ಕಛೇರಿಗಳ ವಿಳಾಸ

| | | | |
|---|---|---|---|
| 1 | **ಜಿಲ್ಲಾ ವ್ಯವಸ್ಥಾಪಕರು,** ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬೆಂಗಳೂರು ದಕ್ಷಿಣ ಜಿಲ್ಲೆ.** ನಂ.123/1037, 1ನೇ ಮಹಡಿ, 20ನೇ ಮುಖ್ಯರಸ್ತೆ, 5ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ರಾಜಾಜಿನಗರ, **ಬೆಂಗಳೂರು–560 010.** ದೂರವಾಣಿ (080–23156006) | 2 | **ಜಿಲ್ಲಾ ವ್ಯವಸ್ಥಾಪಕರು,** ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬೆಂಗಳೂರು ಉತ್ತರ ಜಿಲ್ಲೆ,** #324/62, ಸರ್ವಶೀಲಾ ಕಾಂಪ್ಲೇಕ್ಸ್, ಬಳ್ಳಾರಿ ಮೇನ್ ರೋಡ್, ಗಂಗಾನಗರ, ಬೆಂಗಳೂರು ಉತ್ತರ–560032, ದೂರವಾಣಿ ಸಂಖ್ಯೆ:080–23539600 |
| 3 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬೆಂಗಳೂರು ಗ್ರಾಮಾಂತರ ಜಿಲ್ಲೆ,** #324/62, ಸರ್ವಶೀಲಾ ಕಾಂಪ್ಲೇಕ್ಸ್, ಬಳ್ಳಾರಿ ಮೇನ್ ರೋಡ್, ಗಂಗಾನಗರ, ಬೆಂಗಳೂರು ಉತ್ತರ–560032, ದೂರವಾಣಿ ಸಂಖ್ಯೆ:080–2356007 | 4. | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ರಾಮನಗರ ಜಿಲ್ಲೆ,** ಯುನಿಯನ್ ಬ್ಯಾಂಕ್ ರಸ್ತೆ, ಟೈಪಿಂಗ್ ಇನ್‌ಸ್ಟಿಟ್ಯೂಟ್ ಬಿಲ್ಡಿಂಗ್, 3ನೇ ಮಹಡಿ, ಮಲ್ಲೇಶ್ವರ ಬಡಾವಣೆ, ಐಜೂರು, ರಾಮನಗರ ಜಿಲ್ಲೆ |
| 5. | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಶಿವಮೊಗ್ಗ ಜಿಲ್ಲೆ,** ಜಿಲ್ಲಾ ಪಂಚಾಯತ್ ಹಿಂಭಾಗದ ರಸ್ತೆ, ರೇಣುಕಾಂಬ ಕೃಪ, ಎ ಬ್ಲಾಕ್, 2 ಪ್ಯಾರಲಲ್ ರಸ್ತೆ, ಗಾಂಧಿನಗರ, ಶಿವಮೊಗ್ಗ–577201, ದೂರವಾಣಿ–08182–229634. | 6. | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ತುಮಕೂರು ಜಿಲ್ಲೆ, ಜಿಲ್ಲಾ ಪಂಚಾಯತ್ ಕಛೇರಿ ಎದುರು, ಬಿ.ಹೆಚ್.ರಸ್ತೆ, ತುಮಕೂರು–572103, ದೂರವಾಣಿ–08162–252395 |
| 7. | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಚಿತ್ರದುರ್ಗ ಜಿಲ್ಲೆ,** ನಂ.101, 2ನೇ ಕ್ರಾಸ್, ಜೆ.ಸಿ.ಆರ್.ಬಡಾವಣೆ, ಚಿತ್ರದುರ್ಗ ಜಿಲ್ಲೆ–577501, ದೂರವಾಣಿ–(08194–220882) | 8. | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಕೋಲಾರ ಜಿಲ್ಲೆ,** ಜಿಲ್ಲಾ ಪಂಚಾಯತ್ ಕಛೇರಿ ಆವರಣ, ಕೋಲಾರ–563101, ದೂರವಾಣಿ:08152–240526 |
| 9. | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಚಿಕ್ಕಬಳ್ಳಾಪುರ ಜಿಲ್ಲೆ,** ನಂ.ಎಸ್.ಬಿ.–4, 2ನೇ ಮಹಡಿ, ಜಿಲ್ಲಾ ಆಡಳಿತ ಭವನ, ಚಿಕ್ಕಬಳ್ಳಾಪುರ ಜಿಲ್ಲೆ–562101 ದೂರವಾಣಿ:08156–270909 | 10 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ದಾವಣಗೆರೆ ಜಿಲ್ಲೆ,** ಕುರುಬರ ಹಾಸ್ಟೆಲ್ ಕಟ್ಟಡ, ಜಯದೇವ ಸರ್ಕಲ್ ಹತ್ತಿರ, ಹದಡಿ ರಸ್ತೆ, ದಾವಣಗೆರೆ–577001, ದೂರವಾಣಿ:08192–230934 |

11 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಮೈಸೂರು ಜಿಲ್ಲೆ,** #30, ಎಂ.ಐ.ಜಿ., ಎ.ಜಿ ಕಾಂಪ್ಲೆಕ್ಸ್, 2ನೇ ಮಹಡಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು–570023, ದೂರವಾಣಿ:0821–2341194

12 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಮಂಡ್ಯ ಜಿಲ್ಲೆ,** ನಂ.1153, 2ನೇ ಕ್ರಾಸ್, ಚಾಮುಂಡೇಶ್ವರಿ ನಗರ, ಚಾಮುಂಡೇಶ್ವರಿ ದೇವಸ್ಥಾನದ ಎದುರು, ಮಂಡ್ಯ ಜಿಲ್ಲೆ–511401, ದೂರವಾಣಿ:08232–231804

13 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಚಾಮರಾಜನಗರ ಜಿಲ್ಲೆ,** ಜಿಲ್ಲಾಡಳಿತ ಭವನ, 3ನೇ ಮಹಡಿ, ರೂ.ನಂ.305, ಚಾಮರಾಜನಗರ ಜಿಲ್ಲೆ–576104, ದೂರವಾಣಿ–08226–223587

14 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಉಡುಪಿ ಜಿಲ್ಲೆ,** ಜಿಲ್ಲಾ ಆಡಳಿತ ಭವನ, "ಬಿ" ಬ್ಲಾಕ್, 2ನೇ ಮಹಡಿ, ರಜತಾದ್ರಿ, ಮಣಿಪಾಲ–576104, ಉಡುಪಿ ಜಿಲ್ಲೆ, ದೂರವಾಣಿ:08202–574882

15 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಹಾಸನ ಜಿಲ್ಲೆ,** ನಂ.ಎಂ.ಐಜಿ–32, 23ನೇ ಕ್ರಾಸ್, ಹೌಸಿಂಗ್ ಬೋರ್ಡ್, ಕುವೆಂಪುನಗರ, ಕೆ.ಇ.ಬಿ. ಹತ್ತಿರ, ಹಾಸನ ಜಿಲ್ಲೆ–573201, ದೂರವಾಣಿ–08172–251153

16 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಚಿಕ್ಕಮಗಳೂರು ಜಿಲ್ಲೆ,** ಜಿಲ್ಲಾ ಪಂಚಾಯತ್ ಕಟ್ಟಡದ ಹಿಂಭಾಗ, ರೇಷ್ಮೆ ಇಲಾಖೆ ಕಟ್ಟಡ, ಚಿಕ್ಕಮಗಳೂರು–577101, ದೂರವಾಣಿ–02862–221315

17 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ದಕ್ಷಿಣ ಕನ್ನಡ ಜಿಲ್ಲೆ,** ಡಿ.ದೇವರಾಜ ಅರಸು ಭವನ, ರೇಡಿಯೋ ಪಾರ್ಕ್ ಬಳಿ, ಉರ್ವ ಸ್ಟೋರ್, ಮಂಗಳೂರು–06, ದಕ್ಷಿಣ ಕನ್ನಡ ಜಿಲ್ಲೆ, ದೂರವಾಣಿ–08242–456544

18 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಕೊಡಗು ಜಿಲ್ಲೆ,** ರೇಸ್ ಕೋರ್ಸ್ ರಸ್ತೆ, ರೂಡ್ರಿಕ್ಸ್ ಕಟ್ಟಡದ ಮುಂಭಾಗ, ಮಡಿಕೇರಿ, ಕೊಡಗು–571201, ದೂರವಾಣಿ–08272–221656

19 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬೆಳಗಾವಿ ಜಿಲ್ಲೆ,** ಎಸ್.ಜೆ.ಎಸ್.ವೈ ಮಾರಾಟ ಮಳಿಗೆಗಳ ಕಟ್ಟಡ, 2ನೇ ಮಹಡಿ, ನೆಹರು ನಗರ, ಎ.ಪಿ.ಎಂ.ಸಿ ರಸ್ತೆ, ಬೆಳಗಾವಿ–590010, ದೂರವಾಣಿ–08312–402163

20 **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಹಾವೇರಿ ಜಿಲ್ಲೆ,** ಜಿಲ್ಲಾಡಳಿತ ಭವನ, ಬಿ ಬ್ಲಾಕ್, 2ನೇ ಮಹಡಿ, ರೂ.ನಂ.39, ದೇವಗಿರಿ, ಹಾವೇರಿ–581110, ದೂರವಾಣಿ–08375–249025

| | | | |
|---|---|---|---|
| 21 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಗದಗ ಜಿಲ್ಲೆ,** ಜಿಲ್ಲಾ ಆಡಳಿತ ಭವನ, ರೂ.ನಂ.202, 2ನೇ ಮಹಡಿ, ಹುಬ್ಬಳ್ಳಿ ರಸ್ತೆ, ಗದಗ-582101, ದೂರವಾಣಿ-08372-232327 | 22 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ವಿಜಯಪುರ ಜಿಲ್ಲೆ,** ಜಹಗೀರ್‌ದಾರ್ ಬಿಲ್ಡಿಂಗ್, ಬಾಗಲಕೋಟೆ ರಸ್ತೆ, ಪಾಲಿಟೆಕ್ನಿಕ್ ಕಾಲೇಜು ಎದುರಗಡೆ, ವಿಜಯಪುರ-586101, ದೂರವಾಣಿ:08352-278128 |
| 23 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬಾಗಲಕೋಟೆ ಜಿಲ್ಲೆ,** ಜಿಲ್ಲಾಡಳಿತ ಭವನ, ರೂ.ನಂ.233, 3ನೇ ಮಹಡಿ, ಮಿನಿ ವಿಧಾನಸೌಧ, ನವನಗರ, ಬಾಗಲಕೋಟೆ-587102, ದೂರವಾಣಿ:08354-226216 | 24 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಧಾರವಾಡ ಜಿಲ್ಲೆ,** ಡಿ.ಸಿ.ಕಾಂಪೌಂಡ್, ಮಿನಿ ವಿಧಾನಸೌದ, ನೆಲಮಹಡಿ, ಧಾರವಾಡ-580001, ದೂರವಾಣಿ-08362-446382 |
| 25 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಉತ್ತರ ಕನ್ನಡ ಜಿಲ್ಲೆ,** ವಾಸಿಂ ಮಂಜಿಲ್, 2ನೇ ಮಹಡಿ, ಖಾದಿಮುಲ್ಲಾ ರಸ್ತೆ, ಹೈ ಚರ್ಚ್ ಹತ್ತಿರ, ಕಾರವಾರ-581301, ಉತ್ತರ ಕನ್ನಡ ಜಿಲ್ಲೆ, ದೂರವಾಣಿ-08382-223229 | 26 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಕಲಬುರಗಿ ಜಿಲ್ಲೆ,** 2ನೇ ಮಹಡಿ, ಸಿಟಿ ಸ್ಕ್ವೇರ್ ಬಿಲ್ಡಿಂಗ್, ಬಡೇಪೂರ 3ನೇ ಕ್ರಾಸ್, ವೀರಶೈವ ಕಲ್ಯಾಣ ಮಂಟಪದ ಎದುರುಗಡೆ, ಖರ್ಗೆ ಪೆಟ್ರೋಲ್ ಬಂಕ್ ಹತ್ತಿರ, ಹಾಗರಗಾ ರಿಂಗ್ ರೋಡ್, ಕಲಬುರಗಿ-585105, ದೂರವಾಣಿ-08472-278635 |
| 27 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬೀದರ್ ಜಿಲ್ಲೆ,** ನಂ.9-8-175/5ಬಿ, ಬಿ.ವ್ಹಿ.ಬಿ. ಕಾಲೇಜು ರಸ್ತೆ, ಬಸವನಗರ, ಮೈಲೂರ ಕ್ರಾಸ್, ಬೀದರ್-585401, ದೂರವಾಣಿ-08482-232515 | 28 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಬಳ್ಳಾರಿ ಜಿಲ್ಲೆ,** ಫ್ಲಾಟ್ ನಂ.117, ವೀರನಗೌಡ ಕಾಲೋನಿ ಕ್ಲಬ್ ರಸ್ತೆ, ಕುಮಾರಸ್ವಾಮಿ ದೇವಸ್ಥಾನದ ಹತ್ತಿರ, ಬಳ್ಳಾರಿ-583103, ದೂರವಾಣಿ:08392-267038 |
| 29 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ರಾಯಚೂರು ಜಿಲ್ಲೆ,** ನಂ.1-9-14/2, 1ನೇ ಮಹಡಿ, ಹೆಚ್.ಪಿ ಗ್ರಾಸ್ ಏಜೆನ್ಸಿ ಮೇಲೆ, ನ್ಯೂ ಪಬ್ಲಿಕ್ ಗಾರ್ಡನ್ ಹತ್ತಿರ, ಟ್ಯಾಂಕ್ ಬಂಡ್ ರಸ್ತೆ, ರಾಯಚೂರು-584101, ದೂರವಾಣಿ-08532-250440 | 30 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಕೊಪ್ಪಳ ಜಿಲ್ಲೆ ಜಿಲ್ಲೆ,** ಜಿಲ್ಲಾ ಸಂಕೀರ್ಣ, ಡಿ.ಸಿ. ಕಾಂಪ್ಲೆಕ್ಸ್, ಹೊಸಪೇಟೆ ರಸ್ತೆ, ಕೊಪ್ಪಳ ಜಿಲ್ಲೆ-583231, ದೂರವಾಣಿ-08539-221847 |

| | |
|---|---|
| 31 | **ಜಿಲ್ಲಾ ವ್ಯವಸ್ಥಾಪಕರು,** ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, **ಯಾದಗಿರಿ ಜಿಲ್ಲೆ,** ಮಿನಿ ವಿಧಾನಸೌಧ, 2ನೇ ಮಹಡಿ, ಸಿ ಬ್ಲಾಕ್, ರೂ.ನಂ. ಸಿ14, ಚಿತ್ತಾಪೂರ ರೋಡ್, ಯಾದಗಿರಿ ಜಿಲ್ಲೆ–585 202 ದೂರವಾಣಿ–08473 253746 |

* * * *